

## ‘ವೆಡ್ಡಿಂಗ್ ಕಾರ್ಡ್’

ಮನೆಯಲ್ಲಿ ನಡೆದ ಸಮಾರಂಭವೊಂದಕ್ಕೆ ಮಿತ್ರರೆಲ್ಲ ಸೇರಿದ್ದರು. ಎಲ್ಲರೂ ಸೇರಿ ಲೋಕಭಿರಾಮವಾಗಿ ಮಾತನಾಡುತ್ತಿರುವಾಗ ‘ನೋಟ್ ಬ್ಯಾನ್’ ವಿಷಯ ಬಂತು. ಹಣ ಪಡೆಯುವ ಬಗ್ಗೆ ಚರ್ಚೆಯಾಯಿತು. ಹಿರಿಯರೊಬ್ಬರು ನಗದು ಡ್ರಾ ಮಾಡುವ ಸಾಧನಗಳು ಯಾವುವು? ಎಂದು ಕೇಳಿದರು. ಆಗ ಮತ್ತೊಬ್ಬರು ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ಎಂದರು. ಸುಮ್ಮನಿರದ ಇನ್ನೊಬ್ಬ ಸ್ನೇಹಿತ ‘ಇವು ಎರಡು ಮಾತ್ರವಲ್ಲ, ವೆಡ್ಡಿಂಗ್ ಕಾರ್ಡ್‌ನಿಂದಲೂ ಹಣ ಡ್ರಾ ಮಾಡಬಹುದು’ ಎಂದಾಗ ಅಲ್ಲಿ ನೆರೆದಿದ್ದವರೆಲ್ಲ ಜೋರಾಗಿ ನಕ್ಕರು.

**ನರಸಿಂಹ ಪೈ**

## ದಾಲ್ ಹೊಂದಿಸೋದೇ ಕಷ್ಟ!

ಕಳೆದ ಮೇ ತಿಂಗಳಲ್ಲಿ ನಮ್ಮ ಕುಟುಂಬ ಹಾಗೂ ಬಂಧು ಮಿತ್ರರೊಂದಿಗೆ ಉತ್ತರ ಭಾರತ ಪ್ರವಾಸ ಕೈಗೊಂಡಿದ್ದೆವು. ದೆಹಲಿ, ಕುರುಕ್ಷೇತ್ರ, ಚಂಡೀಘರ್, ವಾಘಾ ಬಾರ್ಡರ್, ಅಮೃತಸರ ಎಲ್ಲ ಸ್ಥಳಗಳನ್ನೂ ನೋಡಿಕೊಂಡು ಪ್ರವಾಸದ ಕೊನೆಯ ಸ್ಥಳವಾದ ಶ್ರೀನಗರಕ್ಕೆ ಬಂದಿದ್ದೆವು. ಅಲ್ಲಿನ ‘ದಾಲ್ ಲೇಕ್’ ಅತ್ಯಂತ ಆಕರ್ಷಣೀಯ ಪ್ರವಾಸೀ ತಾಣ. ನಾವೆಲ್ಲರೂ ಮುಂಜಾನೆ ದಾಲ್ ಲೇಕ್‌ಗೆ ಭೇಟಿ ನೀಡಿದಾಗ ಅಲ್ಲಿ ತಮ್ಮ ಬೋಟ್‌ಗಳನ್ನು ಸಿದ್ಧ ಮಾಡಿಕೊಂಡ ನಾವಿಕರು ಪ್ರವಾಸಿಗರಿಗೆ ಕಾಯುತ್ತಾ ನಿಂತಿದ್ದರು. ಅವರು ನಮ್ಮನ್ನು ಬೋಟುಗಳಲ್ಲಿ ಕುಳ್ಳಿರಿಸಿ, ಕೆಲವೊಂದು ಫೋಟೊ ಶೂಟ್ ತಾಣಗಳಿಗೆ ಕರೆದುಕೊಂಡು ಹೋಗಿ, ಅಲ್ಲಿ ಕಾಶ್ಮೀರಿ ಡ್ರೆಸ್ ಹಾಕಿಸಿ ಫೋಟೊಗಳನ್ನು ವಿವಿಧ ಭಂಗಿಗಳಲ್ಲಿ ಕ್ಲಿಕ್ಕಿಸಿ ನಮಗೆ ನೀಡಿದರು. ನಂತರ ಆ ಫೋಟೊ ನೋಡುತ್ತಾ ವಿನೋದಪ್ರಿಯರಾದ ನಮ್ಮ ಸ್ನೇಹಿತರೊಬ್ಬರು ಎಲ್ಲರ ಛಾಯಾಚಿತ್ರಗಳ ಬಗ್ಗೆ ಕಾಮೆಂಟ್ ಮಾಡುತ್ತಾ, ‘ಇನ್ನೂ ಇಪ್ಪತ್ತು ವರ್ಷಗಳ ಹಿಂದೆಯೇ ನಾವಿಲ್ಲಿಗೆ ಬಂದಿದ್ರೆ ಎಲ್ಲರ ಜೋಡಿ ಇನ್ನೂ ಚೆನ್ನಾಗಿ ಬರ್ತಿತ್ತು’ ಎಂದರು. ಆಗ ನಮ್ಮ ಅಣ್ಣ ಸತ್ಯನಾರಾಯಣ, ‘ಅಯ್ಯೋ ಇಪ್ಪತ್ತು ವರ್ಷಗಳ ಹಿಂದೆ ದಾಲ್(ಬೇಳೆ) ಹೊಂದಿಸೋಕೇ ಹೆಣಗಾಡಬೇಕಿತ್ತು. ಇನ್ನು ‘ಲೇಕ್’ ಎಲ್ಲಿ ನೋಡೋದು?’ ಎಂದಾಗ ಅವರ ಮಾತಿಗೆ ಎಲ್ಲರೂ ಜೋರಾಗಿ ನಗಲಾರಂಭಿಸಿದರು!

**ಶಾಂತಾ ಕೆ.ಪಿ.**



ಚಿತ್ರಗಳು: ಗಣೇಶ ಆಚಾರ್ಯ